expunge the statements from the proceedings made by Mr. V. L. Patil. If you do so, I will not raise a Privilege Motion. Let the Hon. Leader of the House say, was it necessary to make much statements by Mr, V. L. Patil. I did not know till now that Mr, V. L. Patil was a purchasable commodity. Sir, you have got the extraordinary power. You please allow me.

SRI RAMAKRISHNA HEGDE.—Sir, the extraordinary power cannot be ordinarily used,

ಶ್ರೀ ಕೆ. ಎಚ್. ಪಾಟೀಲ್.—ಶ್ರೀಮಾನ್ ವಿ. ಎಲ್. ಪಾಟೀಲ್‌ರವರು, ಕೆ. ಎಚ್. ಪಾಟೀಲ್ ಅವರು ಹೇಗೆ ಬಂದರು ಎಂದು ಹೇಳುವವರು ಅವರ ಮನಸ್ಸಿನೊಳಗೆ ಏನು ಇದೆಯೋ ನನಗೆ ಗೊತ್ತಿಲ್ಲ, ಪರ್ಚೇಸಬಲ್ ಕಮೊಡಿಟಿ ತರಹ ಏಕೆ ಈ ರೀತಿ ಮಾಡುತ್ತೀರಿ ? ಏತಕ್ಕೆ ಈ ಬಗ್ಗೆ ಪ್ರಿವಿಲೇಜ್ ಆಲೋ ಮಾಡಬಾರದು ? ಇಲ್ಲದಿದ್ದರೆ ಇವತ್ತು ಅನಾವಶ್ಯಕವಾಗಿ ನಮಗೆ ಸಂಬಂಧವಿಲ್ಲದ ವಿಷಯವನ್ನು ಇಲ್ಲಿ ತಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ರೆಕಾರ್ಡ್ ತರಿಸಿ ಅದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಬಿ. ಎನ್. ಯಡಿಯೂರಪ್ಪ.—ಒಂದು ಕೋಟಿ ರೂಪಾಯಿ ಏನಾಗಿದೆ ? ಅದು ಯಾರ ಹತ್ತಿರ ಇವತ್ತು ಉಳಿದಿದೆ ಎನ್ನುವುದು ತೀರ್ಮಾನವಾಗಬೇಕು. ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಕೆ. ಎಚ್. ಪಾಟೀಲ್.—ಒಂದು ಕೋಟಿ ಇರಲಿ ಎರಡು ಕೋಟಿ ಇರಲಿ, ಕೋಟಿ ತೆಗೆದು ಕೊಳ್ಳುವವರನ್ನು ಹೆಗಡೆಯವರು ತಮ್ಮ ಮಂತ್ರಿಮಂಡಲದಲ್ಲಿ ಇಟ್ಟುಕೊಂಡರೆ, ಮಂತ್ರಿಪದವಿಯನ್ನು ಅಡಳಿತ ಖರೀದಿ ಮಾಡುವುದಕ್ಕಾಗುತ್ತದೆಯೇ ?

ಸಂತಾಪ ಸೂಚಕ ನಿರಾಶಯ

ಲೋಕಸಭಾ ಸದಸ್ಯರಾದ ಲಲಿತ್ ಮೊಕನ್ ಮಂತ್ತು ಅವರ ಪತ್ನಿಯನ್ನು ಕೊಲೆ ಮಾಡಿದ ಬಗ್ಗೆ

ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ನಾನ ತಮ್ಮ ಅಪ್ಪಣೆ ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮೊನ್ನೆ ದೆಹಲಿಯಲ್ಲಿ ಲೋಕ ಸಭಾ ಸದಸ್ಯರಾದ ಲಲಿತ್ ಮಾಕನ್ ಮಂತ್ತು ಅವರ ಹೆಂಡತಿ ಹಾಗೂ ಮತ್ತೊಬ್ಬರನ್ನು ಯಾರೋ ಕೊಲೆ ಮಾಡಿದ್ದಾರೆ. ಭಯೋತ್ಪಾದನೆ ಜಾಸ್ತಿಯಾಗುತ್ತಿದೆ, ಎಲ್ಲಾ ಭಾಗಗಳಲ್ಲೂ ಕೊಲ್ಲುತಕ್ಕ ಕೆಲಸ ನಡೆದಿದೆ. ಪಂಜಾಬಿನ ವಿಷಯ ಎಲ್ಲರನ್ನು ಯೋಚನೆಗೆ ಈಡುಮಾಡತಕ್ಕ ವಿಚಾರವಾಗಿದ. ಈಗ ನಡೆದಿರತಕ್ಕ ದುರಂತ ಏನಿದೆ ಅದನ್ನು ಎಲ್ಲರೂ ಖಂಡಿಸತಕ್ಕ ವಿಚಾರವಾಗಿದೆ. ಲಲಿತಮೂಕನ್ ಅವರು ಸುಮಾರು ೩೪–೩೫ ವಯಸ್ಸಿನವರು. ಅತಿ ಚಿಕ್ಕ ವಯಸ್ಸಿನಲ್ಲಿ ಲೋಕಸಭಾ ಸದಸ್ಯರಾಗಿದ್ದರು. ಅವರ ಹೆಂಡತಿ ಕೂಡ ಚಿಕ್ಕ ವಯಸ್ಸಿನವರು. ಅವರ ಸಂಬಂಧಿಕರೊಬ್ಬರು ಶಿಫಾರಸ್ಸು ಪತ್ರ ತೆಗೆದುಕೊಳ್ಳಲು ಹೋಗಿದ್ದರು ಅವರನ್ನು ಕೂಡ ಹೊಡೆದುಹಾಕಿದ್ದಾರೆ. ಭಯೋತ್ಪಾದನೆ ಹೆಚ್ಚಾಗುತ್ತಿದೆ, ಪಂಜಾಬಿನಲ್ಲಿ ಬಹಳಷ್ಟು ಜನರನ್ನು ಬಲಿ ತೆಗೆದುಕೊಂಡಿದ್ದಾರೆ. ಎಲ್ಲಾ ರಾಜಕೀಯ ಪಕ್ಷದ ಮುಖಂಡರನ್ನು ಕಾಂಗ್ರೆಸ್ (ಐ) ಪಕ್ಷ. ಜನತಾ ಪಕ್ಷ. ಭಾರತೀಯ ಜನತಾ ಪಕ್ಷ ಲೋಕದಳದ ಅಧ್ಯಕ್ಷರು ಎಲ್ಲಾ ರಾಜಕೀಯ ಪಕ್ಷಗಳ ಮುಂಖಂಡರಿಗೆ ಬೆದರಿಕೆಗಳು ಬಂದಿವೆ. ನಿರಪರಾಧಿಗಳನ್ನು ಕೊಲ್ಲುತಕ್ಕ ಕೆಲಸ ನಡೆಯುತ್ತಿದೆ. ಕಾನಿಷ್ಕ ವಿಮಾನ ದುರಂತಕ್ಕೂ ಅವರೇ ಕಾರಣ ಎನ್ನುವ ಪದಂತಿ ಬರುತ್ತಿದೆ. ಲೋಕಸಭಾ ಮಂತ್ತು ಇತರ ಸಭೆಗಳಲ್ಲಿ ಸದಸ್ಯರಾಗಿರುವವರು ಕೆಲಸಮಾಡುವುದಕ್ಕೆ ಕಷ್ಟವಾಗಿದೆ. ಸಾರ್ವಜನಿಕ ಜೀವನದಲ್ಲಿರತಕ್ಕವರು ಯಾರೂ ಕೂಡ ಇನ್ನು ಮೇಲೆ ಧೈರ್ಯವಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಸಂದರ್ಭ ಆ ಒಂದು ಪರಿಸ್ಥಿತಿ ಬಂದಿದೆ, ಇಂತಹ ಒಂದು ಪರಿಸ್ಥಿತಿಯಲ್ಲಿ ನಾನು ಎಲ್ಲಾ ರಾಜಕೀಯ ಪಕ್ಷಗಳವರನ್ನು ಅಭಿನಂದಿಸುತ್ತೇವೆ. ಧೈರ್ಯವಾಗಿ ರಾಜಕೀಯದಲ್ಲಿ ತಮ್ಮ ಸೇವೆ

ಯನ್ನು ಸಲ್ಲಿಸಂತ್ತಾ ಬಂದಿದ್ದಾರೆ, ಅವರನ್ನು ನಾನು ಮನಸಾರೆ ಮೆಚ್ಚುತ್ತೇನೆ. ಭಯೋತ್ಪಾದನೆ ಅವ್ಯಾಹತವಾಗಿ ನಡೆಯುತ್ತಾ ಇದೆ ನಾನು ಪಂಜಾಬಿನ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಂತ ಹರಚಂದ ಲೊಂಗೋವಾಲ ಮತ್ತು ಕೇಂದ್ರಸರ್ಕಾರದ ಜೊತೆ ರಾಜೀ ಒಡಂಬಡಿಕೆ ನಡೆಯುತ್ತಿರುವಾಗ, ಭಯೋತ್ಪಾದನೆ ವಿವಿಧ ಹಂತಗಳಲ್ಲಿ ನಡೆಯುತ್ತಿರುವ ವಿಚಾರವನ್ನು ನೋಡಿದರೆ ನಿಜವಾಗಿಯೂ ಎಲ್ಲರಿಗೂ ದೇಶವನ್ನು ಮತ್ತೆ ಕಳವಳಕ್ಕೆ ಈಡುಮಾಡಿರತಕ್ಕ ಸನ್ನಿವೇಶದಲ್ಲಿ ನಾವು ನಿರ್ಣಯ ಮೂವ್ ಮಾಡಬೇಕೆಂದು ಈ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಪಕ್ಷಬೇಧವಿಲ್ಲದೆ ನಡೆದಿರತಕ್ಕ ಘಟನೆಯನ್ನು ಖಂಡಿಸಬೇಕಾಗದೆ. ಲಲಿತ್‌ಮಾಕನ್ ಅವರ ಕೊಲೆಯಾಗ ತಕ್ಕ ಸಂದರ್ಭದಲ್ಲಿ ಅವರ ತಂದೆತಾಯಿಗಳು ಮನೆಯ ಉಪ್ಪರಿಗೆಯ ಮೇಲೆ ಇದ್ದರು. ಮಗ ಮತ್ತು ಸೊಸೆಯನ್ನು ಹೊಡೆದದ್ದನ್ನು ಅವರ ತಂದೆ ತಾಯಿಗಳು ನೋಡಿದ್ದಾರೆ. ಆಂಧ್ರಪ್ರದೇಶದ ರಾಜ್ಯ ಪಾಲರಾದ ಉಮಾಶಂಕರ ದಿಕ್ಷೀತ್‌ರವರ ಮಗಳು. ಅಳಿಯ ಅವರನ್ನು ಕೊಲೆ ಮಾಡಿದಾಗ ಆಂಧ್ರ ಪ್ರದೇಶದ ರಾಜ್ಯಪಾಲರು ಸಹ ದೆಹಲಿಯಲ್ಲಿದ್ದರು ಎಂದು ಗೊತ್ತಾಗಿದೆ. ಅವರ ದುಃಖವನ್ನು ಭರಿಸಲಿಕ್ಕೆ ದೇವರು ಅವರಿಗೆ ಶಕ್ತಿಯನ್ನು ಕೊಡಲಿಯೆಂದು ಮೃತರ ಕುಟುಂಬಕ್ಕೆ ನಾವು ಎಲ್ಲರೂ ಸೇರಿ ಸಾಂತಾಪ ಸೂಚಕ ನಿರ್ಣಯವನ್ನು ಮಾಡೋಣ. ಎಲ್ಲಾ ರಾಜಕೀಯ ಪಕ್ಷದವರು ಸಾರ್ವಜನಿಕರು ಒಗ್ಗಟ್ಟಿನಿಂದ ಇಂತಹ ಭಯೋತ್ಪಾದನೆಯನ್ನು ನಿಗ್ರಹ ಮಾಡಲಿಕ್ಕೆ ಕೆಲಸ ಮಾಡಬೇಕು. ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಿಪಕ್ಷದ ನಾಯಕರು ವ್ಯಕ್ತಪಡಿಸಿ ದಂತಹ ಅಭಿಪ್ರಾಯಕ್ಕೆ ಯಾರದೂ ವಿರೋಧವಿಲ್ಲ. ನನ್ನ ಸಹೋದ್ಯೋಗಿಗಳಲ್ಲಿ ಒಬ್ಬರಾದ ರಘುಪತಿ ಯವರು ಲಲಿತ್‌ಮಾಕನ್ ದಂಪತಿಗಳ ಶವಸಂಸ್ಕಾರದಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದಾರೆ. ನಡೆದಂತಹ ಘಟನೆ ಅತ್ಯಂತ ಖಂಡನೀಯ. ಈ ಮನೆಯ ಅಭಿಪ್ರಾಯವನ್ನು ದಯವಿಟ್ಟು ಮೃತರ ಕುಟುಂಬಕ್ಕೆ ಕಳುಹಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು —ನಾನು ಕೂಡ ನಡೆದಂತಹ ದುರ್ಘಟನೆಯನ್ನು ಖಂಡಿಸಂತ್ತೇನೆ. ಮೃತರಿಗೆ ಚಿರಶಾಂತಿ ದೊರೆಯಲಿ ಎಂದು ಭಯಸುತ್ತೇನೆ. ಮೃತರ ಕುಟುಂಬದವರಿಗೆ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ದೇವರು ಕೊಡಲಿಯೆಂದು ಹೇಳುತ್ತೇನೆ.

Call Attentoin Notice

Re (1) Serious consequenees arising out of false caste certificates produced by non SC and ST candidates while entering into Government services depriving the legitimate claims of SC and ST

SRI B. BASAVALINGAPPA.—I call the attention of the Minister for Social Welfare to the serious conseqnences arising out of false caste certificates produced by non SC and ST candidates while entering nto Government services depriving the legitimate claims of SC and ST

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ...

ಶ್ರೀ ಬಿ. ಬಸವಲಿಂಗಪ್ಪ.—ನವಂಗೆ ಉತ್ತರದ ಪ್ರತಿಗಳು ಬಂದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಂದು ಆ ಬಗ್ಗೆ ಪ್ರಸ್ತಾವನೆ ಬರುತ್ತದೆಂದು ಗೊತ್ತಿದ್ದರೂ ಕೂಡ ಅವರು ಉತ್ತರದ ಪ್ರತಿಗಳನ್ನು ಒದಗಿಸಲಿಲ್ಲ ಅಂದರೆ ಹೇಗೆ?

ಅಧ್ಯಕ್ಷರು.—ಉತ್ತರದ ಪ್ರತಿಗಳು ಇಲ್ಲವೇ?

ಶ್ರೀ ವಿ.ಎಲ್. ಪಾಟೀಲ್.—ಇಲ್ಲ.

ಅಧ್ಯಕ್ಷರು.—ಉತ್ತರದ ಪ್ರತಿಗಳನ್ನು ಮುಂಚಿತವಾಗಿ ಏಕೆ ಕೊಡುವುದಿಲ್ಲ ಪ್ರತಿ ದಿವಸವೂ ನಿಮಗೆ ಹೇಳುವುದಕ್ಕಾಗುತ್ತದೆಯೇ? I am very sorry ಯಾವುದೇ ಹೇಳಿಕೆಯನ್ನು ಇಲ್ಲಿ